**ಕರ್ನಾಟಕ ಸರ್ಕಾರ**

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು**

**ಸಂಖ್ಯೆ: ಇ-ಆಡಳಿತ ಶಿಕ್ಷಕರ ಮಾಹಿತಿ 01/2017-18** **ದಿನಾಂಕ: 20.01.2018**

**ಅತಿಜರೂರು**

ಜ್ಞಾಪನ

ವಿಷಯ: **Teacher's Data Software** ತಂತ್ರಾಂಶದಲ್ಲಿ ಅಳವಡಿಸಿರುವ ರಾಜ್ಯದ ಎಲ್ಲಾ ಸರ್ಕಾರಿ ಹಾಗೂ ಅನುದಾನಿತ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರ ಸೇವಾ ಮಾಹಿತಿಗಳನ್ನು ಪರಿಶೀಲಿಸಿಕೊಂಡು ಸರಿಪಡಿಸುವ ಬಗ್ಗೆ.

ಉಲ್ಲೇಖ: 1. ಈ ಕಛೇರಿಯ ಜ್ಞಾಪನ ಸಂಖ್ಯೆ: ಸಿ3(7) ಪ್ರಾಶಾಶಿ ವರ್ಗ 07/2017-18 ದಿನಾಂಕ: 19.01.2018.

2. ಈ ಕಛೇರಿಯ ಸುತ್ತೋಲೆ ಸಂಖ್ಯೆ ಇ-ಆಡಳಿತ ಶಿಕ್ಷಕರ ಮಾಹಿತಿ 01/ 2017-18 ದಿನಾಂಕ: 07.12.2018.

ಉಲ್ಲೇಖ(1) ಈ ಕಛೇರಿಯ ಜ್ಞಾಪನದಲ್ಲಿ ಪ್ರಸ್ತಾಪಿಸಿದಂತೆ, 2017-18 ನೇ ಸಾಲಿನ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಶಿಕ್ಷಕರ ವರ್ಗಾವಣಾ ಪ್ರಕ್ರಿಯೆಗೆ ಸಂಬಂಧಿಸಿದಂತೆ, ಅರ್ಜಿ ಸಲ್ಲಿಸುವ ಅವಧಿಯನ್ನು ದಿನಾಂಕ:30.01.2018 ರವರೆಗೆ ವಿಸ್ತರಿಸಲಾಗಿದೆ.

ಉಲ್ಲೇಖ(2) ರ ಈ ಕಛೇರಿಯ ಸುತ್ತೋಲೆಯಲ್ಲಿ ಪ್ರಸ್ತಾಪಿಸಿದ ವಿಚಾರಗಳಿಗೆ ಮುಂದುವರೆದಂತೆ, ಈವರೆವಿಗೂ ಶಿಕ್ಷಕರ ಮಾಹಿತಿ ತಂತ್ರಾಂಶ (ಟಿ.ಡಿ.ಎಸ್) ದಲ್ಲಿನ ಶಿಕ್ಷಕರ ಮಾಹಿತಿಯನ್ನು ತಿದ್ದುಪಡಿಗಳನ್ನು ಮಾಡುವ ಬಗ್ಗೆ, ಈ ಕೆಳಗೆ ನಮೂದಿಸಿದಂತೆ ಕ್ರಮವಹಿಸಲು ಈ ಮೂಲಕ ಸೂಚಿಸಿದೆ.

- ಶಿಕ್ಷಕರ ಮಾಹಿತಿಯು ಶಿಕ್ಷಕರಿಂದ **Disagree** ಆಗಿದ್ದು ಈವರೆವಿಗೂ **Publish** ಆಗದೇ ಇರುವ ಶಿಕ್ಷಕರ ಮಾಹಿತಿಯನ್ನು ಮತ್ತೊಮ್ಮೆ ಪರಿಶೀಲಿಸಿಕೊಂಡು, ಸೂಕ್ತ ಮಾಹಿತಿಯನ್ನು ತಂತ್ರಾಂಶದಲ್ಲಿ ಅಳವಡಿಸಿ ಕೂಡಲೇ **Publish** ಮಾಡತಕ್ಕದ್ದು.
- ಇದೇ ರೀತಿಯಲ್ಲಿ ಈವರೆವಿಗೂ ಶಿಕ್ಷಕರಿಂದ **Agree** ಆಗಿದ್ದು, ಈವರೆವಿಗೂ **Publish** ಆಗದೇ ಇರುವ ಶಿಕ್ಷಕರ ಮಾಹಿತಿಗಳನ್ನು ಸಹ ತಂತ್ರಾಂಶದಲ್ಲಿ **Publish** ಮಾಡತಕ್ಕದ್ದು.
- ಶಿಕ್ಷಕರು ವರ್ಗಾವಣೆ ಸಂಬಂಧಿಸಿದಂತೆ, ಶಿಕ್ಷಕರ ಮಾಹಿತಿ ತಂತ್ರಾಂಶ (ಟಿ.ಡಿ.ಎಸ್) ದಲ್ಲಿ ಮಾಹಿತಿಯು ತಿದ್ದುಪಡಿಯಾಗಬೇಕಾದ ಪ್ರಕರಣಗಳ ಬಗ್ಗೆ ನಿಮ್ಮ ಕಛೇರಿಗಾಗಲೀ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಾಗಲೀ ಅಥವಾ ಆಯುಕ್ತರ ಕಛೇರಿಗಾಗಲೀ ಈಗಾಗಲೇ ನೇರವಾಗಿ ಅರ್ಜಿ ಸಲ್ಲಿಸಿದ್ದು, ಈವರೆಗೂ ಬಾಕಿ ಉಳಿದಂತಹ ಎಲ್ಲಾ ಶಿಕ್ಷಕರ ಮಾಹಿತಿಗಳನ್ನು ಉಪನಿರ್ದೇಶಕರ ಕಛೇರಿಯ ಹಂತದಲ್ಲಿಯೇ ಪರಿಶೀಲಿಸಿ ಸರಿಪಡಿಸಿಕೊಳ್ಳತಕ್ಕದ್ದು.
- ವರ್ಗಾವಣೆ ಬಯಸುವ ಶಿಕ್ಷಕರಿಗೆ, ಶಿಕ್ಷಕರ ಮಾಹಿತಿ ತಂತ್ರಾಂಶದಲ್ಲಿ (ಟಿ.ಡಿ.ಎಸ್) ಮಾಹಿತಿಯು ಸಂಪೂರ್ಣವಾಗಿ ದೊರೆಯುಂತೆ ಮಾಡಲು ಎಚ್ಚರಿಕೆವಹಿಸತಕ್ಕದ್ದು.
- ಮುಂದುವರೆದಂತೆ, ತಮ್ಮ ಕಛೇರಿಯ ವ್ಯಾಪ್ತಿಗೆ ಬರುವ ಎಲ್ಲಾ ಶಿಕ್ಷಕರಿಗೆ ಈ ವಿಚಾರವನ್ನು ಗಮನಕ್ಕೆ ತರುವ ಬಗ್ಗೆ ವ್ಯಾಪಕವಾಗಿ ಪ್ರಕಟಣೆ ನೀಡಲು ತಿಳಿಸಿದೆ. ಶಿಕ್ಷಕರ ಮಾಹಿತಿ ತಂತ್ರಾಂಶ (ಟಿ.ಡಿ.ಎಸ್)ದಲ್ಲಿರುವ ಮಾಹಿತಿಗಳಲ್ಲಿ ವ್ಯತ್ಯಯದಿಂದಾಗಿ ಶಿಕ್ಷಕರಿಗೆ ವರ್ಗಾವಣೆಗೆ ಅರ್ಜಿ ಸಲ್ಲಿಸಲು ತೊಂದರೆ ಉಂಟಾದ ಸಂದರ್ಭಗಳಲ್ಲಿ ನೀವೇ ನೇರವಾಗಿ ಜವಾಬ್ದಾರರಾಗಿರುತ್ತೀರೆಂದು ಈ ಮೂಲಕ ಸೂಚಿಸಿದೆ.

ಆಯುಕ್ತರು

ಸಾರ್ವಜನಿಕ ಶಿಕ್ಷಣ ಇಲಾಖೆ

ಇವರಿಗೆ

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಇವರುಗಳಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ
2. ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ

ಪ್ರತಿಯನ್ನು

1. ನಿರ್ದೇಶಕರು(ಪ್ರಾಥಮಿಕ ಶಿಕ್ಷಣ) ಆಯುಕ್ತರ ಕಛೇರಿ ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ
2. ನಿರ್ದೇಶಕರು(ಪ್ರೌಢ ಶಿಕ್ಷಣ) ಆಯುಕ್ತರ ಕಛೇರಿ ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ.